ಮಣ್ಣು, ಕಲ್ಲು, ಮರಗಳೊಂದಿಗೆ ಮಾತಾಡುತ್ತ ಚಟ್ಟೆಯಾಗಿ ಆಡಿದರು. ಕ್ಲಿಯೊಳಾಗಿ ಮರುಜನ್ಮ ತಳೆದ ಕಲ್ಯಾಣಿ ನೆನಪಿನಿಂದ ತನ್ನ ಗುರುತಿಸಬಹುದೇ ಎಂದು ತಳಮಳಿಸಿದರು. ದೇಹದಿಂದ ಕಸು ಇಳಿದು ದಣಿವೋ, ನಿತ್ರಾಣವೋ ಏನೋ ಅಪರಿಚಿತ ಅಲವರಿಕೆಯಿಂದ ಕುಸಿಯುವಂತಾಯಿತು. ಕ್ಲಿಯೊ ಹೊತ್ತ ಬಸ್ ಬರಬಹುದೆಂದು ಕಾದು ರಾವ್‌ಗೆ ಬೇಸರವಾಯಿತು. ಶಾಲೆಗೆ ಹೋಗಿ ವಿಚಾರಿಸಿದರು. ಮೆಂಟರ್ ಕ್ಲಿಯೊ ಕಾರ್ಯಕ್ರಮ ರದ್ದಾಗಿದೆ ಎಂದಳು. ಅವಳ ಆರೋಗ್ಯದಲ್ಲಿ ಏರುಪೇರಾಗಿದೆಯಂತೆ. ಅವಳ ಅಭಿಮಾನಿಗಳು ಗುಣಮುಖಳಾಗಲೆಂದು ಪ್ರಾರ್ಥನೆ ಮಾಡುತ್ತಿದ್ದಾರಂತೆ. ಜರ್ಮನ್ ಸ್ವರ ಒತ್ತಿನ ಅವಳ ಇಂಗ್ಲಿಷ್ ಅಸ್ಪಷ್ಟವಾದರೂ ಕ್ಲಿಯೊ ಬಂದು ಮಕ್ಕಳಿಗೆ ಕಲಿಸುವುದು ಏನೆಂದು ವಿಚಾರಿಸಿದರು. ಹಾಡಿನ ಪ್ರಸ್ತುತಿಯ ಮೂಲಕ ಇಂಗ್ಲಿಷ್ ಭಾಷೆಯ ಉಚ್ಚಾರಣೆ ಕಲಿಸುತ್ತಾಳೆ ಎಂದಳು. ಮಕ್ಕಳನ್ನು ಮನೆ ತಲುಪಿಸಲು ಸ್ಕೂಲ್ ವ್ಯಾನ್ ಬಂತು. ರಾವ್ ನಿರಾಸೆಯಲ್ಲಿ ಮರಳಿದರು.

ಆಫೀಸಿನ ಬಿಡುವಿನ ಸಮಯ ಸುಬ್ರೊ ಯೂಟ್ಯೂಬ್ ಚಾನೆಲ್ ತೆರೆದು ಕ್ಲಿಯೊ ಹಾಡುತ್ತಿರುವುದನ್ನು ನೋಡಿದ. ಕಲ್ಯಾಣಿಯ ಮುಖಕ್ಕೆ ಹೋಲಿಕೆಯಿತ್ತು. ಆದರೆ, ಅವಳ ವಯಸ್ಸು ಮೂವತ್ತರ ಆಸುಪಾಸಿರಬಹುದು. ಮೇಕಪ್‌ನಲ್ಲಿ ಪ್ರಾಯ ತುಂಬಿರಬಹುದು. ಕಲ್ಯಾಣಿಯ ಕುರಿತ ಅಪ್ಪನ ಕುತೂಹಲಕ್ಕೆ ಯಾವ ಫಲಾಪೇಕ್ಷೆಯೂ ಇಲ್ಲವೆಂದು ನಂಬುವುದು ಹೇಗೆ? ಅವ್ವ, ಕಲ್ಯಾಣಿ, ಕ್ಲಿಯೊ ಹೀಗೆ ಹೆಣ್ಣಿನ ಮಾಯಾ ಅವತಾರಗಳ ಸರಣಿಯ ಹಿಂದೆ ಬಿದ್ದ ಅಪ್ಪನಿಗೆ ಸತ್ಯ ಮಿಥ್ಯೆಗಳ ಅಂತರ ಅರಿವಾಗದ ಮರಳು ಉಂಟಾಗಿದೆಯೆ? ಯೂಟ್ಯೂಬ್ ಚಾನೆಲ್ ಜಾಲಾಡಿ ಅದರ ಮಾಲೀಕ ಮಾಣಿಕ್ ದೇಶಪಾಂಡೆ ಎಂದು ಪತ್ತೆ ಮಾಡಿದ. ಕಲ್ಯಾಣಿಯ ಕೈ ಹಿಡಿದವ. ಜರ್ಮನಿಗೆ ಬಂದು ಹಣ ಸಂಪಾದಿಸಿದ ಭಾರತೀಯ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬ. ಅವನು ಆರಂಭಿಸಿದ ಕ್ಲಿಯೊ ಚಾನೆಲ್ಲಿಗೆ ಲಕ್ಷಾಂತರ ಅಭಿಮಾನಿ ಅನುಯಾಯಿಗಳಿದ್ದಾರೆ. ಸುಬ್ರೊ ಎಂದಿಗಿಂತ ಮೊದಲೆ ಮನೆಗೆ ಬಂದ. ರಾವ್ ರೂಮಿನಲ್ಲಿ ಹಾಡು ಕೇಳುತ್ತಿದ್ದಾರೆ. ಬಚ್ಚಲಲ್ಲಿ ಶಾವರ್‌ಗೆ ತಲೆ ಒಡ್ಡಿ ಸುಬ್ರೊ ಆಡುತ್ತಿದ್ದ ಮಾತು ಕೇಳಿ ರಾವ್ ಹಾಡು ನಿಲ್ಲಿಸಿ ಆಲಿಸಿದರು. ಸ್ನೇಹಿತರು ಬಂದಿರಬಹುದೆಂದು ಅನುಮಾನವಾಯಿತು. ಸುಬ್ರೊನ ಸ್ವಗತ ದನಿ ಮಾತ್ರ ಇದೆ. ಈ ನಾಸ್ತಿಕ ಮಂತ್ರ ಪಠಣ ಮಾಡುತ್ತಿದ್ದಾನೆಯೆ? ಸನಿಹ ನಿಂತು ಆಲಿಸಿದರು. 'ಬೆನ್ನು ನಿಧಾನ ಉಜ್ಜು. ಕಣ್ಣಿಗೆ ಸೋಪಿನ ನೊರೆ ಹತ್ತೈತಿ ನೀರು ಕೊಡು. ಅಪ್ಪನ ಜೋಡಿ ನೀ ಮಾತಾಡಿದ್ದಕ್ಕ ಬ್ಯಾಸರ ಬರ್‍ಲಿಲ್ಲ. ನಿನ್ನ ಗೆಳತಿ ಫೋನ್ ಹಚ್ಚಿಲ್ಲೇನು. ಸಾಕ್ ಬಿಡು'. ಟವೆಲ್ಲಿಂದ ತಲೆಗೂದಲನ್ನು ಗಸಗಗಸ ಒರಸುತ್ತ ರೂಮು ಹೊಕ್ಕು, 'ಏ ಇಲ್ಲಿ ಬಾ. ಜೀನ್ಸ್ ಮ್ಯಾಲೆ ನೀಲಿ ಶರ್ಟ್ ಹಾಕಲಿ? ಕಳಚಿಟ್ಟ ಬಟ್ಟೆ ತೊಳೆಯಾಕ ಹಾಕು.' ಎನ್ನುತ್ತ ಅಡುಗೆ ಮನೆಗೆ ಬಂದ. ರಾವ್‌ಗೆ ಸ್ವಲ್ಪ ಭಯವಾಯಿತು. 'ಟೊಮೆಟೊ ತಿಳಿ ಸಾರು ಮಾಡ್ತಿಯಲ್ಲ. ಅನ್ನ ನಾ ಮಾಡ್ತೀನಿ. ನಿನ್ನ ಅಮ್ಮನಿಗೆ ವೀಸಾ ಸಿಕ್ಕಿದ್ರೆ ತಡಾ ಮಾಡ್ಬೇಡ ಏರ್ ಟಿಕೆಟ್ ತಗೊ ಅವ್ರೂ ಬಂದು ಹೋಗ್ಲಿ. ಬ್ಯಾಳಿ ತೀರ್‍ಯೆತಿ...' ಟೇಬಲ್ ಒರಸುತ್ತಿದ್ದದ್ದನ್ನು ನೋಡುತ್ತ ನಿಂತ ಅಪ್ಪನತ್ತ ತಿರುಗಿ ಸುಬ್ರೊ, 'ಕಷ್ಟ ಯಾಕ ಪಡ್ತಿದ್ದಿ ಲಗ್ನಾ ಆಗು ಎಂದು ಹೇಳಾಕೆ ನಿಂತಿ ನೀನು. ಗಂಡಸರು ಅಡುಗೆ ಮಾಡುವಾಗ ಮದ್ವಿ ನೆನಪ ಯಾಕ ಆಗ್ತದ? ಒಲಿ ಹಚ್ಚಾಕ ಮಾತ್ರ ಹೆಂಡ್ತಿ ಇದ್ರ ಸಾಕು ಅಂದಾಂಗಾತು. ಕ್ಲಿಯೊ ಬರ್‍ಲಿಲ್ಲ ಅಂತ ಗೊತ್ತಾತು. ಸಾಲಿಗೆ ಆಗಳೆ ಫೋನ್ ಹಚ್ಚಿದ್ದೆ..' ರಾವ್ ತುಟಿ ಬಿಚ್ಚದೆ ರೂಮಿಗೆ ಮರಳಿದರು. ಕ್ಲಿಯೊ ಹಾಡು ಹಿಂಸೆಯಾಯಿತು. ಮೊಬೈಲ್ ಆಫ್ ಮಾಡಿ ಅಡ್ಡಾದರು.

ರಾವ್ ಮುಂದಿನ ವಾರ ಭಾರತಕ್ಕೆ ಹಿಂದಿರುಗುತ್ತಾರೆ. ಅಷ್ಟರೊಳಗೆ ಕ್ಲಿಯೊ ಭೇಟಿ ಮಾಡಲು ಅವರು ಹಂಬಲಿಸಿದ್ದಾರೆ. ಸುಬ್ರೊ ಆಫೀಸಿಗೆ ಒಂದು ದಿನ ರಜೆ ಹಾಕಿದ. ಕ್ಲಿಯೊ ಸ್ಟುಡಿಯೊ ಬ್ಲ್ಯಾಕ್ ಫಾರೆಸ್ಟಿನ ಕುಕೂ ಗ್ರಾಮದಲ್ಲಿದೆ. ಅದು ದೇಶಪಾಂಡೆಯವರ ಒಡೆತನದಲ್ಲಿರುವ ಸಂಸ್ಥೆ. ರೈಶನ್‌ಬಾಕ್‌ನಿಂದ ಕಾರಿನಲ್ಲಿ ಒಂದುವರೆ ಗಂಟೆಯ ಪ್ರಯಾಣ. 'ದೇಶಪಾಂಡೆ ನನಗಿಂತ ಒಂದು ವರ್ಷ ಸೀನಿಯರ್. ನಾವೆಲ್ಲ ಕರ್ನಾಟಕ ಕಾಲೇಜಲ್ಲಿ ಓದಿವಿ' ರಾವ್ ನೆನಪಿಸಿಕೊಂಡರು. 'ನಿನ್ನ ಗುರ್ತ ಹಿಡೀತಾರ ಹಾಂಗಾದ್ರ'. 'ನಲವತ್ತು ವರ್ಷ ಆತು'.